**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ ಸಿ ನಂಃ 2492/2022**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**- ವಿರುದ್ಧ -**

ಆರೋಪಿಃ **ಪ್ರಶಾಂತ ಪಾಂಡುರಂಗಾ ಖಾರ್ವಿ,**
ವಯಸ್ಸುಃ 24 ವರ್ಷ, ಉದ್ಯೋಗಃ ಮೀನುಗಾರಿಕೆ ಕೆಲಸ,
ವಾಸಃ ನದಿಭಾಗ, ಖಾರ್ವಿಕೇರಿ, ಬೊಬ್ರುವಾಡ ಗ್ರಾಮ,
ಅಂಕೋಲಾ ತಾಲೂಕು.

**ದೋಷಾರೋಪಣೆ**

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ-

ದಿನಾಂಕಃ 06-02-2021 ರಂದು ಬೆಳಿಗ್ಗೆ 10-00 ಗಂಟೆಯ ಸಮಯದಲ್ಲಿ ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯ ಹೊನ್ನಾವರ ತಾಲ್ಲೂಕಿನ ಶ್ರೀದೇವಿ ಆಸ್ಪತ್ರೆ ಹತ್ತಿರ ಕೆಳಗಿನ ಪಾಳ್ಯಕ್ಕೆ ಹೋಗುವ ರಸ್ತೆಯಲ್ಲಿ ಅಂಡರ್ ಪಾಸ್ ಹತ್ತಿರ ಆರೋಪಿತನಾದ ನೀನು ಚಾಸಾ-1/ಕುಮಾರಿ ಅಶ್ವಿನಿ ಗಣಪತಿ ತಾಂಡೇಲ್‌ರವರನ್ನು ಸಾರ್ವಜನಿಕ ಸ್ಥಳದಲ್ಲಿ ಕೈ ಹಿಡಿದು ಎಳೆದಾಡಿ ಅವಮಾನ ಪಡಿಸಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 354** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ-1ರವರನ್ನು ಉದ್ದೇಶಿಸಿ ಬೋಳಿರಂಡೆ, ಬೇವರ್ಸಿರಂಡೆ ನೀನು ತನಗೆ ಬೇಕು, ನಾನು ಕರೆದಲ್ಲಿ ನೀನು ಬರಬೇಕು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಾಗೂ ಚಾಸಾ-1ರವರ ವಿರುದ್ಧವಾಗಿ ಬಸ್ಸ ಮುಖಾಂತರ ಗೋಕರ್ಣಕ್ಕೆ ಕರೆದುಕೊಂಡು ಹೋಗಿ ವೈಭವ ಲಾಡ್ಜನಲ್ಲಿ ರೂಮ್ ಮಾಡಿ ಉಳಿದು ನಿನ್ನ ಮೊಬೈಲನಲ್ಲಿ ಚಾಸಾ-1ರವರು ನಿದ್ದೆಗಣ್ಣಿನಲ್ಲಿರುವಾಗ ನಗ್ನಾವ್ಯಸ್ಥೆಯ ಆಶ್ಲೀಲ ವಿಡಿಯೋ ಮಾಡಿಕೊಂಡು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 504, 509** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ-1ರವರನ್ನು ಉದ್ದೇಶಿಸಿ ನೀನು ಈ ರೀತಿ ಮಾಡಿದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲಾ ಅಂತಾ ಜೀವ ಬೆದರಿಕೆ ಹಾಕಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 506** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ದಿನಾಂಕಃ 14-02-2021 ರಾತ್ರಿ 08.00 ಗಂಟೆಯ ಸಮಯದಲ್ಲಿ ಆರೋಪಿತನಾದ ನೀನು ಚಾಸಾ-1ರವರ ಬೆತ್ತಲೆ ದೇಹದ ವಿಡಿಯೋವನ್ನ ಚಾಸಾ-1ರವರ ಅಣ್ಣನಿಗೆ ಹಾಗೂ ನಿನ್ನ ಸಂಬಂಧಿಕರಿಗೆ ಕಳುಹಿಸುತ್ತೇನೆ

ಹಾಗೂ ಇನಸ್ಟಾಗ್ರಾಮಗೆ ಹಾಕುತ್ತೇನೆ ಅಂತಾ ಚಾಸಾ-1ರವರಿಗೆ ಬೆದರಿಕೆ ಹಾಕಿ, ನಿನ್ನ ವಾಟ್ಸಪ್ ಮೊಬೈಲ್ ನಂಬರ 9740328130 ನೇದರಿಂದ ಚಾಸಾ-1ರವರ ಭಾವನಾದ ಚಾಸಾ-13/ಮಾರುತಿ ಆಶೋಕ ತಾಂಡೇಲ್ ಇವರ ವಾಟ್ಸಪ್ ಮೊಬೈಲ್ ನಂಬರ 7619525210 ನೇದಕ್ಕೆ ಕಳುಹಿಸಿಕೊಟ್ಟಿದ್ದು ಹಾಗೂ ಚಾಸಾ-1ರವರ ಹೆಸರಿನಲ್ಲಿ ಇನಸ್ಟಾಗ್ರಾಂ ಖಾತೆ ಮಾಡಿ ಚಾಸಾ-1ರವರ ಆಶ್ಲೀಲ ವಿಡಿಯೋವನ್ನು ಹರಿಬಿಟ್ಟು, ಚಾಸಾ-1ರವರ ಮಾನಕ್ಕೆ ಕುಂದುಂಟು ಪಡಿಸಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 354(ಎ), 354(ಸಿ),** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ನೀವು ಮೇಲಿನ ಆರೋಪದಡಿಯಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ

ಪ್ರಶ್ನೆ 1. ನಿಮ್ಮ ಮೇಲೆ ಹೊರಿಸಲಾದ ಆರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ

(ಸದರಿ ಹೇಳಿಕೆಯನ್ನು ನನ್ನ ಸಮಕ್ಷಮ ಅರ್ಥವಾಗುವ ಭಾಷ್ಷೆಯಲ್ಲಿ ಓದಿ ಹೇಳಿದ್ದು ಆರೋಪಿತನು ನ್ಯಾಯಾಲಯದ ಮುಂದೆ ನೀಡಿದ ವಿಚಾರಣೆಗಳು ಸರಿ ಇರುತ್ತವೆ ಅಂತಾ ಈ ಮೂಲಕ ಪ್ರಮಾಣಿಕರಿಸಲಾಗಿದೆ)

ಸಹಿ ಇದೆ

**ದಿನಾಂಕಃ20-03-2023** **(ಚಂದ್ರಶೇಖರ ಈ ಬಣಕಾರ).,**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.